## 2

# ಶ್ರೇಷ್ಠ ಸಂಗತಿಗಳನ್ನು ಮಾಡಿದ ಮನುಷ್ಯನು

## (2 ಅರಸು 2:19-25; 8:4)

ಎಲೀಯನ ಆಕರ್ಷಣೀಯ ಕಾರ್ಯಗಳಿಂದಾಗಿ ಎಲೀಷನ ಕಾರ್ಯವು ಮಸಕಾಗಿ ಕಾಣಿಸತೊಡಗಿದವು. ಎಲೀಯನು ಹೊಸಒಡಂಬಡಿಕೆಯಲ್ಲಿ ಮೂವತ್ತಕ್ಕಿಂತಲೂ ಹೆಚ್ಚು ಬಾರಿ ಸೂಚಿತವಾದರೆ ಎಲೀಷನು ಒಂದೇ ಸಾರಿ ಸೂಚಿತವಾಗಿದ್ದಾನೆ (ಲೂಕ 4:27). ಶಿಕ್ಷಕರು ಮತ್ತು ಬೋಧಕರು ಯಾವಾಗಲೂ "ಎಲೀಷ" ಎಂದು ಹೇಳುವ ಸಮಯದಲ್ಲಿ "ಎಲೀಯ" ಎಂದು ಹೇಳುತ್ತಾರೆ (ನಾನು ಸಹ ಇದನ್ನೆ ಅನೇಕ ಸಾರಿ ಮಾಡಿದ್ದೇನೆ). ಎಲೀಷನ ಸೇವೆಯ ವ್ಯಾಪ್ತಿ, ಆತನ ಅದ್ಭುತಗಳ ಶ್ರೇಷ್ಠತೆ ಅಥವಾ ಆತನ ತಲಮಾರಿನವರ ಮೇಲೆ ಆತನ ಜೀವಿತ ಪ್ರಭಾವದ ಬಗೆಗೆ ಅನೇಕರು ಅರಿವುಳ್ಳವರಾಗಿಲ್ಲ. ಆತನ ಸೇವೆಯ ವಿಷಾಲತೆಯು ಎಲೀಯನದನ್ನೂ ಮೀರಿದ್ದಾಗಿದೆ. (ಒಂದು ವೇಳೆ ನಾವು ಎಲೀಯನ ಸೇವಕನಾಗಿ ಕೆಲಸಮಾಡಿದ ಆ ಹತ್ತು ವರ್ಷಗಳನ್ನೂ ಸೇರಿಸಿದ್ದಾದರೆ ಆತನ ಸೇವೆಯು ಐವತ್ತು ವರ್ಷಕ್ಕೆ ಎಣಿಸಲ್ಪಡುತ್ತದೆ.) ಮುಂದೆ, ಎಲೀಷನ ಅದ್ಭುತಕಾರ್ಯಗಳನ್ನು ಹೋಲಿಸಿದಾಗ ಅದು ಎರಡು ಪಟ್ಟು ಹೆಚ್ಚಿರುವುದನ್ನು ಗಮನಿಸಬೇಕು.

ಒಂದು ಸಂದರ್ಭದಲ್ಲಿ, ಎಲೀಷನ ಸೇವಕನಾದ ಗೇಹಜಿಯು ಇಸ್ರಾಯೇಲಿನ ಅರಸನ ಸನ್ನಿಧಿಯಲ್ಲಿದ್ದನು. ಬಹುಶಃ ಆತನು ಅಲ್ಲಿ ಪ್ರವಾದಿಯಿಂದ ಕಳುಹಿಸಲ್ಪಟ್ಟ ಸಂದೇಶವನ್ನು ತೆಗೆದುಕೊಂಡು ಹೋಗಿರಬಹುದು. ಗೇಹೆಜಿಯು ಅಲ್ಲಿರುವಾಗ, ಅರಸನು ಅವನಿಗೆ "ಎಲೀಷನು ಮಾಡಿದ ಎಲ್ಲಾ ಮಹತ್ಕಾರ್ಯಗಳನ್ನೂ ನನಗೆ ವಿವರಿಸು" (2 ಎಲೀಷ 8:4) ಎಂದು ಆಜ್ಞಾಪಿಸಿದನು. ಒಂದು ವೇಳೆ ಎಲೀಷನು ಅಲ್ಲಿ ಉಪಸ್ಥಿತನಿದ್ದರೆ, ಆತನು ಅರಸನ ಮಾತುಗಳನ್ನು ಇನ್ನೊಂದು ರೀತಿಯಲ್ಲಿ "ಮಹಾತ್ಕಾರ್ಯಗಳನ್ನು ದೇವರೊಬ್ಬನೇ ಮಾಡುತ್ತಾನೆ" ಎಂದು ಹೀಗೆ ಹೇಳುತ್ತಿದ್ದನೇನೋ. ಆದರೆ ಎಲೀಷನು ಅನೇಕ "ಮಹಾತ್ಕಾರ್ಯಗಳನ್ನು" ಮಾಡಲು ದೇವರು ಅವನನ್ನು ಸಮರ್ಥನನ್ನಾಗಿಸಿದನು.

ಎಲೀಷನ ಅನೇಕ "ಮಹಾತ್ಕಾರ್ಯಗಳು" "ಸಹಾಯಮಾಡುವ ಅದ್ಭುತಗಳು" ಎಂದು ಲಕ್ಷಣೀಕರಿಸಲ್ಪಡಬಹುದು. ಈ ಅದ್ಭುತಗಳಿಂದ ಹೊರಹೊಮ್ಮುವ ಸಂದೇಶ ಎಂದರೆ "ದೇವರು ನಮ್ಮನ್ನು ಕಾಯುವ ದೇವರು" ಎಂದು ಹೇಳಬಹುದು. ಹೇಗೋ, ಆಗಾಗ ಎಲೀಷನ ಕೆಲಸಕ್ಕೆ ಕೊರತೆಯುಕ್ತ ಸಂಗತಿಗಳು ಇವೆ. ಆತನ ವ್ಯಕ್ತಿತ್ವವು ಎಲೀಯನಿಗಿಂತಲೂ ಭಿನ್ನವಾಗಿದೆ, ಆದರೆ ಆತನಲ್ಲಿ ಸಂಪೂರ್ಣವಾಗಿ "ಮಧುರತೆ ಮತ್ತು ಪ್ರಕಾಶಯುಕ್ತನಾಗಿ" ಇರುವ ಪ್ರವಾದಿ ಎಂದು ನಾವು ಪರಿಗಣಿಸಬಾರದು. ಸರ್ವಶಕ್ತನಾದ ದೇವರಿಗೆ ವಿರುದ್ಧವಾಗಿ ಜನರು ತಿರುಗಿಬಿದ್ದಾಗ, ಎಲೀಷನು ಶಿಕ್ಷೆಗೆ ನಿಯೋಗಿಯಾಗಿ ದೇವರ ಸೇವಕನಾಗಿ ಸೇವೆಮಾಡಿದನು. ಆದ್ದರಿಂದ, ಎಲೀಷನ ಸೇವೆಯು ದ್ವಿಗುಣವುಳ್ಳದ್ದೆಂದು ನಾವು ಅರ್ಥೈಸಿಕೊಳ್ಳಬಹುದು:

- ದೇವರನ್ನು ಆತನ ಸಂದೇಶಕರನ್ನೂ ಮತ್ತು ಆತನ ಸಂದೇಶ ವನ್ನೂ, ಗೌರವಿಸು ಮತ್ತು ನೀನು ಆಶೀರ್ವದಿಸಲ್ಪಡುವಿ.
- ದೇವರನ್ನು, ಆತನ ಸಂದೇಶಕರನ್ನೂ ಮತ್ತು ಆತನ ಸಂದೇಶವನ್ನೂ ಗೌರವಿಸುವಲ್ಲಿ ನೀನು ವಿಫಲನಾಗುವವದಾದರೆ ನೀವು ಶಪಿಸಲ್ಪಡುವಿ.

ಈ ಪಾಠದಲ್ಲಿ, ಎಲೀಷನ ಮೊದಲಿನ ಎರಡು ಸಂದೇಶಗಳನ್ನು ನಾವು ಅಭ್ಯಾಸಿಸಲಿದ್ದೇವೆ. ಇವುಗಳು ಪ್ರತ್ಯಕ್ಷವಾಗಿ ಪವಿತ್ರ ಗ್ರಂಥದ ಉದಾರಣೆಗಳಿಂದ ಈಗ ಸೂಚಿಸಲಾದ ಎರಡು ಸಂದೇಶಗಳಾಗಿವೆ.

## ಗೌರವ ಪೂರ್ವಕವಾದ ಆಶೀರ್ವಾದ: ನೀರು ವಾಸಿಮಾಡಲ್ಪಟ್ಟಿದ್ದು (2:19-22)

ಹಿಂದಿನ ಪಾಠವು ಎಲೀಯನನು ಹುಡುಕಲು ಹೋದ ಐವತ್ತು ಮಂದಿ ಪ್ರವಾದಿ ಮಂಡಲಿಯವರ ನಿರರ್ಥಕವಾದ ಪ್ರಯತ್ನವನ್ನು ಎಲೀಷನು ಅಣಗಿಸಿದ್ದರಿಂದ ಮುಕ್ತಾಯವಾಯಿತು. ಆ ಘಟನೆಯ ನಂತರ, ದೇವರು ತಾನೇನು ಮಾಡಬೇಕೆಂದು ಬಯಸುವವನಾಗಿದ್ದಾನೆ ಎಂಬುದನ್ನು ಅರಿಯಲು ಎಲೀಷನು ಪ್ರತ್ಯಕ್ಷವಾಗಿ ಯೆರಿಕೋ ಪಟ್ಟಣದಲ್ಲಿ ಕಾದಿದ್ದನು. ಆತನ ಮೊದಲ ಅವಕಾಶವು ಬೇಗನೇ ಬಂದಿತು: ಆ ಪಟ್ಟಣದ ಜನರು ವಿನಂತಿಯೊಡನೆ ಅಲ್ಲಿಗೆ ಬಂದರು (ವಚನ 19ಎ). ಎಲೀಷನು ಸರಳವಾಗಿ ಜನರಿಂದ ಸಂಧಿಸಲ್ಪಡುವ, ಕಷ್ಟದ ಸಮಯದಲ್ಲಿ ಕರುಣೆ ತೋರಿಸುವ ವ್ಯಕ್ತಿ ಎಂದು ಖ್ಯಾತಿಯನ್ನು ಹೊಂದಿದ್ದನು. ದೇವರಿಗೆ ಇನ್ನೂ ಇಂಥ ಸ್ವಭಾವವನ್ನು ಹೊಂದಿದ ವ್ಯಕ್ತಿಗಳ ಅವಶ್ಯಕತೆಯು ಇನ್ನೂ ಇದೆ.

### ಶಾಪ

ಆ ಜನರು, "ನಮ್ಮ ಒಡೆಯನಾದ ನಿನಗೆ ಗೊತ್ತಿರುವಂತೆ, ಈ ಊರು ಕಟ್ಟಲ್ಪಟ್ಟಿರುವ ಸ್ಥಳವು ಒಳ್ಳೇದಾಗಿದೆ" (ವಚನ 19ಬಿ) ಎಂದು ಪ್ರಾರಂಭಿಸಿದರು. ಯೆರಿಕೋ ಪಟ್ಟಣವು ಮೃತ್ಯು (ಉಪ್ಪು) ಸಮುದ್ರದ ("ಎಲೀಷನ ದಿನಗಳಲ್ಲಿ ಇಸ್ರಾಯೇಲು ಮತ್ತು ಸುತ್ತಲಿನ ರಾಜ್ಯಗಳನ್ನು" ತೋರಿಸುವ ನಕಾಶೆಯನ್ನು ಈ ಪಾಠದಲ್ಲಿ ಮತ್ತೊಂದು ಕಡೆ ನೋಡಿರಿ). ವಾಯುವ್ಯ ದ್ವಾರದಿಂದ ಸುಮಾರು ಹತ್ತು ಮೈಲಿ ಅಂತರದಲ್ಲಿನ ಯೋರ್ದನ್ ಕೊಳ್ಳದ ದಕ್ಷಿಣ ಭಾಗದಲ್ಲಿ ಸ್ಥಿತವಾಗಿದೆ. ಆ ಪಟ್ಟಣವು ಪ್ಯಾಲೆಸ್ಟೇನಿನ (ಈಗ ಅದು ಏನ್ ಎಸ್ ಸುಲ್ತಾನ್) ದೊಡ್ಡದಾದ ತಾಜಾನೀರಿನ ಹೊಳಗಳಿಂದ ಸುತ್ತುವರೆಯಲ್ಪಟ್ಟು ಬೆಳೆದಿದೆ: ಇದೊಂದು ಓಯಾಸಿಸನಲ್ಲಿಯ ಕೊರಕಲಾದ ಭೂಭಾಗವಾಗಿತ್ತು. "ಕರ್ಜೂರ ಪಟ್ಟಣಗಳಿರುವ ಮೈದಾನ" (ಧರ್ಮೋಪದೇ ಕಾಂಡ 34:3) ಮತ್ತು ಅಂಜೂರದ ಮರಗಳು (ಲೂಕ 19:4) ಸುಗಂಧಿತ ಗಾಳಿ ಕಂಟಿಗಳಿಂದ, ಅಂತರದಲ್ಲಿ ಮೋವಾಬ ಅಂತರದಲ್ಲಿ ಬೆಟ್ಟಗಳಿಂದ ಕೂಡಿದ ಯೆರಿಕೋ ಪಟ್ಟಣವು ಅಲ್ಹಾದಕರ ಸ್ಥಳವಾಗಿತ್ತು.[1]

ಹೇಗೋ, ಯೆರಿಕೋ ಪಟ್ಟಣದ ಜನರಿಗೆ ಒಂದು ಸಮಸ್ಯೆಯಿತ್ತು: "ನೀರು ಕೆಟ್ಟದ್ದಾಗಿರುವುದರಿಂದ ಬಂಜೆತನ ಹೆಚ್ಚಾಗಿತ್ತು" (ವಚನ 19ಸಿ). ವಚನ 19ರಲ್ಲಿನ "ಕೆಟ್ಟದ್ದಾಗಿತ್ತು" ಎಂಬ ಇಬ್ರಿಯ ಪದವು "ಕೆಟ್ಟದು"[2] ಎಂಬರ್ಥವನ್ನು ಕೊಡುವುದಾಗಿದೆ. J B ಯು ಇದನ್ನು "ಶಾಪ" ಎಂದಿದೆ. ಶಾಪದ ನೀರು "ಬುಗ್ಗೆಯಿಂದ" ಬಂದಿತ್ತು (ವಚನ 21) - ಬಹುಶಃ ತಾಜಾ ನೀರಿನ ಬುಗ್ಗೆಯು ಇಲ್ಲಿ ಸೂಚಿತವಾಗಿರಬಹುದು.

ಭಾಷಾಂತರವಾದ ಇಬ್ರಿಯ ಪದಗಳಾದ ವಚನ 19ರಲ್ಲಿನ "ಬಂಜೆತನ" ಮತ್ತು ವಚನ 21ರ "ಬಂಜೆತನ" ಎಂಬುದರ ಇಬ್ರಿಯ ಪದದ ಅರ್ಥವು "ಗರ್ಭಪಾತ" ಎಂಬುದಾಗಿದೆ. ಕೆಲವರು ಇದನ್ನು ಭೂಮಿಯ ಬಂಜೆತನವನ್ನು ಸೂಚಿಸುವುದಾಗಿದೆ ಎಂದು ಯೋಚಿಸುತ್ತಾರೆ;[3] ಆದರೆ Donald Wiseman ಪ್ರಕಾರ "ಇಬ್ರಿಯ ಪದವು ಸಾಮಾನ್ಯವಾಗಿ ವ್ಯಕ್ತಿಯನ್ನು ಅಥವಾ ಪಶು ಸಂಪತ್ತನ್ನು ಸೂಚಿಸಲು ಬಳಸಲಾಗುತ್ತದೆ[3] ಎನ್ನುತ್ತಾರೆ. CJB ಯಲ್ಲಿ "ಭೂಮಿಯು ಗರ್ಭಪಾತಕ್ಕೆ ಕಾರಣವಾಗಿತ್ತು" ಎಂದಿದೆ. ಭೂಮಿಗೆ ಸಂಭವಿಸಿದ ಸಂಗತಿಗಳಿಂದಾದ ಪರಿಣಾಮವು ಆ ಭೂಮಿಯ ನಿವಾಸಿಗಳ ಮೇಲೂ ಆಗುತ್ತಿದ್ದು ಕಲುಷಿತ ನೀರು ಎರಡಕ್ಕೂ ಹಾನಿಯುಂಟು ಮಾಡುತ್ತಿತ್ತು.

ನೀರಿನ ಸಮಸ್ಯೆಯು ಬಹುಶಃ ಹಿಂದಿನ ಕಾಲದ ಶಾಪದ ಕಾರಣದಿಂದ ಇರಬಹುದು. ಮೊದಲನೆಯದು ಮೋಶೆಯ ಬಾಯಿಂದ ಮಾತನಾಡಲ್ಪಟ್ಟ ಸಾಮಾನ್ಯವಾದ ಶಾಪವಾಗಿರಬಹುದು. ಮೋಶೆಯು ಇಸ್ರಾಯೇಲ್ ಜನರಿಗೆ, "ನೀವು ನಿಮ್ಮ ದೇವರಾದ ಯೆಹೋವನ ಮಾತಿಗೆ ಕಿವಿಗೊಡದೆ ನಾನು ಈಗ ಬೋಧಿಸುವ ಆತನ ಆಜ್ಞಾವಿಧಿಗಳನ್ನು ಅನುಸರಿಸದೇ ಹೋದರೆ ... ಅಶುಭಗಳು ನಿಮಗೆ ಪ್ರಾಪ್ತವಾಗುವವು" (ಧರ್ಮೋಪದೇಶಕಾಂಡ 28:15): "ಶಾಪವು ನಿಮ್ಮ ಸಂತಾನ ವ್ಯವಸಾಯಗಳಿಗೂ ದನಕುರಿಗಳಿಗೂ ಅಶುಭವುಂಟಾಗುವದು" (ವಚನ 18).

ಎರಡನೆಯದಾಗಿ, ಯೆಹೋಶುವನು ಯೆರಿಕೋ ಪಟ್ಟಣ ನಾಶವಾದ ನಂತರ ನಿರ್ಧಿಷ್ಟವಾದ ಶಾಪದ ಬಗೆಗೆ ಮಾತನಾಡಿದ್ದಾನೆ: "ಯೆರಿಕೋ ಪಟ್ಟಣವನ್ನು ಕಟ್ಟುವುದಕ್ಕೆ ಕೈ ಹಚ್ಚುವ ಮನುಷ್ಯನು ಯೆಹೋವನ ದೃಷ್ಟಿಯಲ್ಲಿ ಶಾಪಗ್ರಸ್ತನಾಗಲಿ" (ಯೆಹೋಶುವ 6:26ಎ). ಆ ಶಾಪದಿಂದಾಗಿ, ಯೆರಿಕೋ ಪಟ್ಟಣವು ಅರಸನಾದ ಆಹಾಬನ ಆಳ್ವಿಕೆಯ ಸಮಯದಲ್ಲಿ ತಿರುಗಿ ಕಟ್ಟಲ್ಪಟ್ಟಿತು (1 ಅರಸು 16:34). ಜನರು ದೇವರ ಮಾತನ್ನು ಅಲಕ್ಷಿಸಿದರು; ಆದರ ಪರಿಣಾಮವಾಗಿ, ಯೆರಿಕೋವಿನ ನಿವಾಸಿಗಳು ತೊಂದರೆಗೀಡಾದರು. F. W. Krummacher ರವರು ಈ ಸನ್ನಿವೇಶವನ್ನು ಈ ರೀತಿಯಲ್ಲಿ ಚಿತ್ರಿಸಿದ್ದಾರೆ:

> ಸಸ್ಯಕ್ಕೆ ಯೋಗ್ಯವಾಗಿದ್ದ ಮಣ್ಣು, ಫಲವತ್ತತೆಯಲ್ಲಿ ಸ್ಪರ್ದಾಳುವಾಗಿ ಪವಿತ್ರಭೂಮಿಯ ಹೆಚ್ಚು ಉತ್ಪಾದನಾ ಭಾಗವಾಗಿತ್ತು ... (ಆದರೆ ಈಗ) ಖರ್ಜೂರದ ಮರಗಳು ಬಳಲಿ ಇಳಿಮುಖವಾಗಿವೆ; ತೋಟಗಳು ಬೀರುತ್ತಿದ್ದ ಸುಗಂಧವು ಇನಿಲ್ಲವಾಗಿವೆ; ಒಂದು ಸಾರಿ ಸೊಂಪಾಗಿ ಬೆಳದ ಹುಲ್ಲುಗಾವಲಿನ ಮೇಲೆ ಕರುವು ಕ್ಷೀಣಿಸಿದಂತಿದೆ ಮಂದೆಗಳು ತಮ್ಮ ಮರಿಗಳನ್ನು ಕೊಟ್ಟಿಗೆಯಲ್ಲಿ ಬಿಟ್ಟುಬಿಟ್ಟಿವೆ; ಮತ್ತು ತಮ್ಮನ್ನು ತಾವು ರೋಗದಲ್ಲಿ ತಪ್ತರಾಗಿಸಿಕೊಳ್ಳುತ್ತವೆ ಮತ್ತು ಬೇಗನೇ ಮರಣಹೊಂದುತ್ತವೆ.[4]

ಹೀಗೆ ಆ ನಗರದ ಜನರು ಎಲೀಷನೆಡೆಗೆ ಸಹಾಯವನ್ನು ಕೇಳುವುದಕ್ಕಾಗಿ ಬಂದರು.

**ವಾಸಿಯಾಗುವಿಕೆ**

ಎಲೀಷನು ಅವರಿಗೆ, "ಒಂದು ಹೊಸ ಮಡಿಕೆಯಲ್ಲಿ ಉಪ್ಪು ಹಾಕಿ ಅದನ್ನು ತಂದು ಕೊಡಿರಿ" ಎಂದು ಹೇಳಿದನು (2 ಅರಸು 2:20ಎ). ಹೊಸ ಮಡಿಕೆಯು ಯಾಕೆ? ಬಹುಶಃ ಇದು ಸಹಜವಾದ ಬಳಿಕೆಯಿಂದ ಅಪವಿತ್ರವಾಗಬಾರದೆಂಬ ಕಾರಣದಿಂದಿರಬಹುದು.[5] ಉಪ್ಪು ಯಾಕೆ? ಬಹುಶಃ ಉಪ್ಪು ಇಸ್ರಾಯೇಲ್ಯರು ದೇವರ ಜೊತೆ ಇರುವ ಒಡಂಬಡಿಕೆಗೆ ಕಾರಣವಾಗಿತ್ತು (ನೋಡಿರಿ ಯಾಜಕಕಾಂಡ 2:13). ಇದನ್ನು ಹೇಳಿದ ನಂತರವೂ ನಾವು ಕೇಳಬೇಕಾದ ಪ್ರಶ್ನೆಯೆಂದರೆ, ಹೊಸದಾದ ಮಡಿಕೆ ಮತ್ತು ಉಪ್ಪು ನೀರನ್ನು ಶುದ್ಧಿಕರಿಸುವುದಕ್ಕೆ ಏನು ಸಂಬಂಧವು ಇದೆ? ಹಳೆಯ ಮಡಿಕೆಯಲ್ಲಿನ ಉಪ್ಪು ಹೊಸ ಮಡಿಕೆಯಲ್ಲಿನ ಉಪ್ಪಿನಂತೆಯೇ ನೀರಿನಲ್ಲಿ ಹೆಚ್ಚು ಪ್ರಭಾವಯುತವಾಗಿರುವದಿಲ್ಲವೋ? ಯೆರಿಕೋವಿನ ನಿವಾಸಿಗಳು ಉಪ್ಪಿನ ಸಮುದ್ರದಿಂದ ಕೇವಲ ಹತ್ತೆಮ್ಮೈಲು ದೂರದಲ್ಲಿದ್ದರು. ಉಪ್ಪುನೀರು ಸಸ್ಯಗಳನ್ನು ಬೆಳೆಯಲು ಬಿಡುವುದಿಲ್ಲವೆಂದೂ ಬದಲಾಗಿ ಸಸ್ಯವನ್ನು ಕೊಲ್ಲುವುದು ಎಂದು ಅವರು ತಿಳಿದಿದ್ದರು. ಮುಂದೆ ಉಪ್ಪು ಗುಣವನ್ನು ಶುದ್ಧಿಮಾಡಿದ್ದಾದರೆ, ಅದನ್ನು ಬುಗ್ಗೆಯಲ್ಲಿ ಸುರಿಯುವದರಿಂದ ಅದು ಮುಟ್ಟಿದ ನೀರನ್ನು ಮಾತ್ರ ಪರಿಣಾಮಕ್ಕೆ ಒಳಪಡಿಸಬಲ್ಲದು ಹಾಗೂ ಬುಗ್ಗೆಯಲ್ಲಿ ನಿರಂತರವಾಗಿ ಹರಿಯುವ ನೀರಿಗೆ ಯಾವ ಪರಿಣಾಮವು ಆಗುವುದಿಲ್ಲ. ಹೀಗೆ ಆ ವಾಸಿಮಾಡುವಿಕೆಯು ಶಾಶ್ವತವಾದದ್ದಲ್ಲ.

ಎಲೀಷನು ಹೊಸ ಮಡಿಕೆಯನ್ನು ಮತ್ತು ಉಪ್ಪನ್ನು ತಗೆದುಕೊಳ್ಳಬೇಕೆಂದಿದ್ದು ಯಾಕೆಂದರೆ ಇದೇ ರೀತಿಯಲ್ಲಿಯೇ ಮೋಶೆಯು ಅರಣ್ಯದಲ್ಲಿ ನೀರಿನ ಕಹಿತನವನ್ನು

ಸಿಹಿಯಾಗಿಸಲು ಮರದ ರೆಂಬೆಗಳನ್ನು ಬಳಸಿದ್ದನು (ವಿಮೋಚನಕಾಂಡ 15:22-25). ಯಾಕೆಂದರೆ ಹೊಸಮಡಿಕೆ, ಉಪ್ಪು, ಮತ್ತು ಮರದ ರೆಂಬೆಗಳು ನಿಶ್ಚಿತವಾಗಿ ನೀರನ್ನು ಶುದ್ಧ ಪಡಿಸುವುದರಲ್ಲಿ ಮತ್ತು ಕೆಟ್ಟದ್ದನ್ನು ಮಾಡುವಲ್ಲಿ ಯಾವ ಪರಿಣಾಮವನ್ನು ಬೀರುವುದಿಲ್ಲ ಆದ್ದರಿಂದ ನಿಶ್ಚಿತವಾಗಿ ಈ ಎಲ್ಲಾ ಶಕ್ತಿಯು ಮಾನವನು ಮಾಡುವ ರೀತಿಯಲ್ಲಿ ಇಲ್ಲ, ಆದರೆ ದೇವರ ಮನುಷ್ಯನಲ್ಲಿ ಇತ್ತು (ನೋಡಿರಿ 2 ಅರಸು 2:21ಬಿ).

ಯಾಕೆ ದೇವರು ಆಗ ಎಲೀಷನಿಗೆ *ಏನನ್ನೂ* ಬಳಸಲು ಬಿಡಲಿಲ್ಲ? ಬಹುಶಃ ಯಾರು ವಿಧೇಯತೆಯಲ್ಲಿ ವಿಶ್ವಾಸದಿಂದಿರಲು ಪ್ರತಿಕ್ರಯಿಸುವವರಾಗಿರುತ್ತಾರೋ ಅವರನ್ನು ಮಾತ್ರ ಆಶೀರ್ವದಿಸುವದನ್ನು ಸಂಸ್ಥಾಪಿಸಲು ದೇವರು ಬಯಸಿದ್ದನು. ಎಲೀಷನು ತಾನೇ ಮಡಿಕೆಯನ್ನೂ ಮತ್ತು ಉಪ್ಪನ್ನು ತರಲಿಲ್ಲ; ಅದನ್ನು ಮಾಡಲು ಆತನು ಆ ಪಟ್ಟಣದ ಜನರನ್ನು ಹೊಂದಿದ್ದನು. ಅವರು ಒಂದು ವೇಳೆ "ಯಾಕೆ? ಅದರಿಂದ ಏನನ್ನೂ ಮಾಡಲು ಸಾಧ್ಯವೇ ಇಲ್ಲ"? ಎಂದು ಪ್ರತಿಕ್ರಯಿಸಿದ್ದಾದರೆ ಏನಾಗುತ್ತಿತ್ತು? ಎಲೀಷನು ಹೇಳಿದಂತವುಗಳನ್ನು ಅವರು ತರದೇ ಇದ್ದಿದ್ದರೆ ಏನಾಗುತ್ತಿತ್ತು? ನೀರು ಇನ್ನೂ ಅಶುದ್ಧವಾಗಿಯೇ ಇರುತ್ತಿತ್ತು, ಮತ್ತು ಅವರ ಕಷ್ಟಗಳು ಮುಂದುವರೆಯುತ್ತಿದ್ದವು.

ಅದೃಷ್ಯವಶಾತ್ ಅವರು ಮಾಡಲು ಬೇಸರಿಸಲಿಲ್ಲ. ಅವರು "ಮಡಿಕೆಯನ್ನೂ ಮತ್ತು ಉಪ್ಪನ್ನೂ ತಂದರು" (ವಚನ 20ಬಿ). ಆತನು ನಂತರ "ಬುಗ್ಗೆಗೆ ಹೋಗಿ ಆ ನೀರಿನಲ್ಲಿ ಉಪ್ಪು ಹಾಕಿ - ಇನ್ನು ಮುಂದೆ ಈ ನೀರಿನಿಂದ ಮರಣವೂ ಬಂಜೆತನವೂ ಉಂಟಾಗದಂತೆ ಇದರಲ್ಲಿದ್ದ ದೋಷವನ್ನೆಲ್ಲ ಪರಿಹರಿಸಿದ್ದೇನೆ ಎಂಬುದಾಗಿ ಯೆಹೋವನು ಅನುತ್ತಾನೆ ಎಂದು ಹೇಳಿದನು" (ವಚನ 21). CJB ಯಲ್ಲಿ "ಇದು ಇನ್ನು ಮುಂದೆ ಮರಣಕ್ಕೂ ಗರ್ಭಪಾತಕ್ಕೂ ಕಾರಣವಾಗಿರುವುದಿಲ್ಲ" ಎಂದಿದೆ.

2 ಅರಸುಗಳ ಲೇಖಕನು[6] ಆಗ ಈ ವ್ಯಾಖ್ಯಾನವನ್ನು ಸೇರಿಸಿದ್ದಾನೆ: "ಕೂಡಲೇ ನೀರಿನಲ್ಲಿದ್ದ ದೋಷವೆಲ್ಲಾ ಪರಿಹಾರವಾಯಿತು; ಎಲೀಷನ ವಾಕ್ಯಬಲದಿಂದ ಅದು ಇಂದಿನವರೆಗೂ (ಲೇಖಕನು ಜೀವಿಸಿದ ದಿನದವರೆಗೂ) ಹಾಗೆಯೇ ಇರುತ್ತದೆ" (ವಚನ 22). ಅನೇಕ ಅಧಿಕಾರಿಗಳು ನಂಬುವುದೇನೆಂದರೆ, ನಮ್ಮ ದಿನದಲ್ಲಿಯೂ ಕೂಡಾ ನೀರು ಈಗಲೂ ನಿರಂತರವಾಗಿ ಹರಿಯುತ್ತಿದ್ದು - ಶುದ್ಧವೂ ಮತ್ತು ಶಾಂತವಾಗಿ ಇದೆ ಎಂದಿದ್ದಾರೆ. ಒಂದು ವೇಳೆ ನೀವು ಪ್ರಾಚೀನ ಯೆರಿಕೋವಿನ ಪ್ರದೇಶಕ್ಕೆ ಭೇಟಿ ಇತ್ತಿದ್ದಾದರೆ, ನಿಮಗೆ "ಎಲೀಷನ ಕೊಳವು" (ಐನ್ ಎಸ್ ಸುಲ್ತಾನ) ನಿಮಗೆ ತೋರಿಸಲ್ಪಡುವದು ಮತ್ತು ಆ ನೀರನ್ನು ಕುಡಿಯಲು ನಿಮಗೆ ಆಮಂತ್ರಣ ಕೊಡಲ್ಪಡುವದು T. J. McComisky ರವರ ಪ್ರಕಾರ, ಈ ಬುಗ್ಗೆಯು "ಯೆರಿಕೋವಿನ ಸುತ್ತಲಿನವರಿಗೆ ಇನ್ನೂ ಮಹತ್ವದ ಒಳ್ಳೇಯ ನೀರಿನ ಮೂಲವಾಗಿದೆ"[7] ಎಂದು.

ದೇವರು ತಾನೇ ಸಹಾಯಿಸುವ ಮತ್ತು ವಾಸಿಮಾಡುವ ದೇವರೆಂದು ತಿರುಗಿ ಸಿದ್ಧ ಮಾಡಿ ತೋರಿಸುತ್ತಿದ್ದಾನೆ (ನೋಡಿರಿ ಕೀರ್ತನೆ 103:3; 147:3; ಯೆಶಾಯ 30:26). ಒಂದು ವೇಳೆ ಆ ಭೂಮಿಯು ಶಾಪದಡಿಯಲ್ಲಿ ಇದ್ದುದಾದರೆ (ಈ ಪ್ರಕರಣದಲ್ಲಿ ಕಂಡಹಾಗೆ), ಆತನು ಎಲೀಷನ ಮೂಲಕ ಆ ಶಾಪವನ್ನು ತೆಗೆದುಬಿಟ್ಟನು. ಆತನ ಪ್ರವಾದಿಗೆ ಹಾಗೆಯೇ ಆತನಿಗೂ ಗೌರವವನ್ನು ತೋರಿದವರು ಆಶೀರ್ವದಿಸಲ್ಪಟ್ಟರು. Krummacher ರವರು, ಅಲ್ಲಿ ಉದಯಿಸಿದ ಸಂತೋಷದ ಚಿತ್ರಣವನ್ನು ಈ ಮಾತಿನಲ್ಲಿ ಚಿತ್ರಿಸಿದ್ದಾರೆ:

> ಹೊಲಗಳು ತನ್ನ ಹಿಂದಿನ ಫಲವತ್ತತೆಯನ್ನು ಪುನಃ ಧರಿಸಿದವು, ಮತ್ತು ಮನುಷ್ಯನು ಹಾಗೂ ಮೃಗಗಳು (ನವೀಕರಣಗೊಂಡ) ಜೀವನ ಮತ್ತು ಬಲದಲ್ಲಿ ಸಂತೋಷಿಸಿದವು. ರೈತನ ಎಲ್ಲಾ ಶೋಧನೆಗಳಲ್ಲಿ ಹಾಳಾಗುವಿಕೆಯು ಕಾಣಿಸಲಿಲ್ಲ; ಯೆರಿಕೋವಿನ ನಿವಾಸಿಗಳು ಸಂತೋಷದಿಂದ ಮತ್ತು ಉತ್ಸಾಹದಿಂದ ತುಂಬಿದರು, ಚಟುವಟಿಕೆಯಿಂದ ತುಂಬಿದ ಗಡಿಬಿಡಿಯು ತರುಣರಲ್ಲಿ ಮತ್ತು ವೃದ್ಧರಲ್ಲಿ ಹೀಗೆ

ಎಲ್ಲೆಡೆಯೂ ಕಾಣಿಸಿಕೊಂಡಿತು. ಕೊಯ್ಲಿನ ಯಂತ್ರದ ಸಂತೋಷದ ಕೂಗಾಟವು ಪುನಃ ಹೊಸದಾಗಿ ದ್ರಾಕ್ಷೇ ಅಚ್ಛಾದಿತ ಗುಡ್ಡಗಳಲ್ಲಿ ಪ್ರತಿಧ್ವನಿಸಿತು, ಕುರುಬನ ಕುರಿಗಳು ಆತನ ಸುತ್ತಲೂ (ನೆಗೆದಾಡುತ್ತಾ) ಇವೆ, ಏಕಾಂಗಿಯಾದ ಕೊಳಲಿನ ಧ್ವನಿಗೆ ಮೈದಾನವು ಪ್ರತಿಕ್ರಿಯೆ ತೋರಿಸುತ್ತಿವೆ. ಸ್ಥಳೀಯ ವ್ಯವಸಾಯಗಾರನು ನಿರೀಕ್ಷಿತವಾದ ಬೆರೆಯದ ಸಂತೋಷದೊಡನೆ ಮಹಾಸುಗ್ಗಿಯ ಸಮೃದ್ಧತೆಯ ವಾಗ್ದಾನದೊಡನೆ ಮತ್ತು ದಾರಿ ಹೋಕನು ಹೊಗಳಬಹುದಾದಂತಹ ... ಉಲ್ಲಾಸಗೊಳಿಸುವಂತಹ ತಾಜಾತನವು ಯೆರಿಕೋವಿನ ನೀರಿನದಾಗಿತ್ತು.[8]

## ಅವಮಾನ ಮಾಡಿದವರ ಮೇಲೆ ಶಾಪ ಅಣುಗಿಸುವವರು ಆಕ್ರಮಣಕ್ಕೊಳಗಾದುದ್ದು (2:23, 24)

ನಾವು ಈಗ ಎಲೀಷನ ಜೀವಿತದಲ್ಲಿನ ಬಲು ವಿವಾದಗ್ರಸ್ತವಾದ ಘಟನೆಯೆಡೆಗೆ ಬಂದಿದ್ದೇವೆ: ಅದು ಪ್ರವಾದಿಯನ್ನು ಅಣಕಿಸಿದ ಯೌವನಸ್ಥರ ಮೇಲೆ ಕರಡಿಗಳು ಆಕ್ರಮಣ ಮಾಡಿದ ಘಟನೆಯೇ ಅದಾಗಿದೆ. ಎಲೀಷನ ಸಹಾಯಕಾರಿಯಾದ ಸೇವೆಯ ಕಥೆಗಿಂತ ಎಲೀಯನ ಬೆಂಕಿಮಯ ಸೇವೆಯು ಹೆಚ್ಚು ಯೋಗ್ಯವಾಗಿ ಕಂಡುಬರುತ್ತದೆ. KJV ಯು ಈ ವಿವಾದವನ್ನು ಸೂಚಿಸುತ್ತಾ ಆ ಅಣಕಿಸುವವರು "ಚಿಕ್ಕ ಮಕ್ಕಳು" ಎಂದಿದೆ (2 ಅರಸು 2:23; KJV). ಅವರು "ಏನೂ ತಿಳಿಯದ, ಸುಂದರವಾದ, ಮುಗ್ಧವಾದ ಮಕ್ಕಳು" ಎಂದು ಅನುಕಂಪವನ್ನು ಸುರಿಸುವದನ್ನು ಕೇಳುವದು ಸಹಜವಾದುದ್ದು ಆಗಿದೆ.

ವಾಸ್ತವವಾಗಿ ಇವರುಗಳು ಮುಗ್ಧ ಮಕ್ಕಳು ಹೌದೋ ಅಲ್ಲವೋ ಎಂಬುದನ್ನು ನಾವು ಇನ್ನೂ ಚರ್ಚಿಸುವಾ. ಆದರೆ ಆ ಕ್ಷಣದಲ್ಲಿ, ಪರಿಶುದ್ಧಾತ್ಮನು ಈ ಕಥೆಯನ್ನು ಎಲೀಷನ ಜೀವಿತದಲ್ಲಿ ಯಾಕೆ ಹೆಣೆದಿದ್ದಾನೆ ಎಂಬುದನ್ನು ನಾವು ಪರಿಗಣಿಸಬೇಕಾಗಿದೆ. ಬಹುಶಃ ವಾಸ್ತವವಾಗಿ ಇದು ಎಲೀಷನು ದೇವರ ಪ್ರತಿನಿಧಿಯಾಗಿದ್ದನು ಎಂಬುದನ್ನು ಸ್ಥಾಪಿಸಲು ಈ ಕಥೆಯು ಜೋಡಿಸಲಾಗಿದೆ. ಆತನು (ಎಲೀಷನು) ಅನುಕೂಲನೂ ಮತ್ತು ಸಹಾಯಮಾಡುವವನೂ ಆಗಿದ್ದನು, ಆದರೆ ಅದು ಆತನು ಅಶಕ್ತನು ಎಂಬರ್ಥವನ್ನು ಕೊಡುವುದಿಲ್ಲ. ದೇವರ ಪ್ರತಿನಿಧಿಯಾದಂತಹ ಅವನು, ಗೌರವಿಸಲ್ಪಡುತ್ತಿದ್ದನು. ಆತನನ್ನು ಹಿಯಾಳಿಸಿದವರು ತಮ್ಮದೇ ಆಪತ್ತಿನಲ್ಲಿ ಇರುತ್ತಿದ್ದರು.

### ಅಗೌರವಯುಕ್ತ ಅಪಹಾಸ್ಯ

ಕಥೆಯು, "ಎಲೀಷನು ಅಲ್ಲಿಂದ [ಯೆರಿಕೋವಿನಿಂದ] ಬೇತೇಲಿಗೆ ಹೊರಟನು" ಎಂದು ಪ್ರಾರಂಭವಾಗುತ್ತದೆ (ವಚನ 23ಎ). ವೇದಭಾಗದಲ್ಲಿ "ಹೊರಟು" ಎಂದಿದೆ. ಯಾಕೆಂದರೆ ಆ ದಿನ್ನೆಯ ಯೋರ್ಧನ್ ಕೊಳ್ಳದಿಂದ ಬೇತೇಲು ಇರುವ ಎತ್ತರದ ಪ್ರದೇಶದವರೆಗೆ ಕಡಿದಾಗಿ ಮತ್ತು ಉದ್ದವಾಗಿಯು ಇತ್ತು ("ಎಲೀಷನ ದಿನಗಳಲ್ಲಿ ಇಸ್ರಾಯೇಲು ಮತ್ತು ಸುತ್ತಲಿನ ರಾಜ್ಯಗಳನ್ನು" ತೋರಿಸುವ ನಕಾಶೆಯನ್ನು ಈ ಪಾಠದಲ್ಲಿ ಮತ್ತೊಂದು ಕಡೆ ನೋಡಿರಿ). ಕೆಲದಿನಗಳ ಹಿಂದೆ, ಎಲೀಷ ಮತ್ತು ಎಲೀಯರು ಅಲ್ಲಿನ ಪ್ರವಾದಿಮಂಡಲಿಗೆ ಭೇಟಿ ನೀಡಿದ್ದರು, ಮತ್ತು ಎಲೀಯನು "ತೆಗೆದುಕೊಳ್ಳಲ್ಪಟ್ಟನು" ಎಂಬ ವಿಷಯ ಅಲ್ಲಿನ ವಿದ್ಯಾರ್ಥಿಗಳಿಗೆ ತಿಳಿದಿತ್ತು (ನೋಡಿರಿ 2:2, 3). ಬಹುಶಃ ಅಲ್ಲಿ ನಿವಾಗಿ ಯಾವ ಸಂಗತಿಯು ಸಂಭವಿಸಿತು ಎಂದು ಹೇಳಲು ಎಲೀಷನು ಬೇತೇಲಿನ ಪ್ರವಾದಿ ಮಂಡಲಿಯವರನ್ನು ನವೀಕರಿಸಲು ಬಯಸಿರಬಹುದು.

ಬೇತೇಲು ಇಸ್ರಾಯೇಲ್ಯರ ಇತಿಹಾಸದಲ್ಲಿ ಪವಿತ್ರವಾದ ಸ್ಥಳವಾಗಿತ್ತು. ಯೆರಿಕೋವಿನಲ್ಲಿಯೇ ಯಾಕೋಬನು ಆಕಾಶಕ್ಕೆ ನಿಚ್ಚಣಿಕೆಯನ್ನು ಹಾಕಿದಂತಹ ಕನಸನ್ನು ಕಂಡಿದ್ದು. ನಂತರ ಆತನು ಆ ಸ್ಥಳಕ್ಕೆ "ಬೇತೇಲು" ಎಂದು ಹೆಸರಿಟ್ಟನು. ಇದು "ಮನೆಗೆ" ಇರಬಹುದಾದ

(ಇಂಗ್ಲೀಷ್‌ನಲ್ಲಿ "ಬೇತ್") ಇಬ್ರಿಯ ಪದದ ಜೊತೆ ದೇವರ ಬಲು ಸಾಮಾನ್ಯವಾದ ಬಿರುದಿನಲ್ಲಿ ಒಂದಾದ ಎರಡೂ ಜೊತೆಯಾಗಿ "ಬೇತೇಲು" ಆಗಿದೆ. ಅದರ ಅರ್ಥವು "ದೇವರ ಮನೆ" ಎಂಬುದಾಗಿದೆ (ಆದಿಕಾಂಡ 28:10-19). ದುಃಖಕರವಾದದ್ದೆಂದರೆ, ಇದು ದೇವರ ಮನೆಯ ಬದಲಾಗಿ, ದೇವರಲ್ಲದ ವಿಗ್ರಹರಾಧಕರ ನೆಲೆಯಾಯಿತು. ಅರಸನಾದ ಯೆರೊಬ್ಬಮನು ಬೇತೇಲಿನಲ್ಲಿ ಬಂಗಾರದ ಬಸವನನ್ನು ಇಡಿಸಿದನು ಮತ್ತು ಆ ಪಟ್ಟಣವನ್ನು ಇಸ್ರಾಯೇಲ್ಯರ ಉತ್ತರ ರಾಜ್ಯದಲ್ಲಿ ವಿಗ್ರಾಹಾರಾಧನೆಯ ಕೇಂದ್ರವನ್ನಾಗಿ ಮಾಡಿದನು (1 ಅರಸು 12:26-33; ನೋಡಿರಿ ಆಮೋಸ 3:14; 4:4, 5).

ಎಲೀಷನು ಬೇತೇಲಿಗೆ ಹತ್ತಿರವಾದಂತೆ, ಆ ಊರಿನ ಹುಡುಗರು ಹೊರಗೆ ಬಂದು - "ಬೋಳಮಂಡೆಯವನೇ, ಏರು; ಬೋಳಮಂಡೆಯವನೇ ಏರು ಎಂದು ಕೂಗಿ ಅವನನ್ನು ಅಪಹಾಸ್ಯ ಮಾಡಿದರು!" (2 ಅರಸು 2:23ಬಿ). NASB ಯಲ್ಲಿ ಯೌವನಸ್ಥರಾದ ಬಾಲರು: ಎಂಬುದರ ಬದಲಾಗಿ "ಚಿಕ್ಕಮಕ್ಕಳು" ಎಂದಿರುವುದನ್ನು ಗಮನಿಸಿರಿ. "ಬಾಲರು ಎಂಬುದಕ್ಕೆ ಭಾಷಾಂತರವಾದ ಇಬ್ರಿಯ ಪದವು ಯಾವಾಗಲೂ ಹಳೆಯ ಒಡಂಬಡಿಕೆಯಲ್ಲಿ ತರುಣರಿಗೆ ಉಪಯೋಗಿಸುವಂತದ್ದಾಗಿದೆ. ಇದರ ಏಕವಚನದ ರೂಪವು ಯೋಸೇಫನು ಮೂವತ್ತು ವಯಸ್ಸಿನವನಿರುವುದನ್ನು ಸೂಚಿಸಲು ಬಳಕೆಯಾಗದೆ" (ನೋಡಿರಿ ಆದಿಕಾಂಡ 41:12). ಭೋವಜನ ಕೊಯ್ಲಿನಲ್ಲಿ (ರೂತ 2:15), ಅಬ್ಷಾಲೋಮ (2 ಸಮುವೇಲ 18:5), ಯೆರಮಿಾಯ (ಯೆರಮಿಾಯ 1:6, 7) ಮತ್ತು ಆಹಾಬನ ಸೈನಿಕರಿಗೆ (1 ಅರಸು 20:14) ಈ ಪದವು ಬಳಕೆಯಾಗಿದೆ. ಅನೇಕ ವ್ಯಾಖ್ಯಾನಕಾರರು 2 ಅರಸು 2ರಲ್ಲಿನ "ಹುಡುಗರು" ಹನ್ನೆರಡರಿಂದ ಇಪ್ಪತ್ತರ ವಯಸ್ಸಿನ ಮಧ್ಯದವರಿರಬಹುದು. ಅವರು ಆಡುವ ಹುಡುಗರು ಎಂದು ನೆನೆಸದಿರಿ. ಬದಲಾಗಿ, ದುಷ್ಟರಾದ ತರುಣರು ಯೆಹೋವನ ಪ್ರವಾದಿಯ ಘರ್ಜನೆಯ ಮುಂದೆ ಬೊಗ್ಗಿಸಲ್ಪಟ್ಟರು ಎಂದು ಯೋಚಿಸಿರಿ. ಅಂಥ ವ್ಯಕ್ತಿಗಳನ್ನು ನಮ್ಮ ಪ್ರದೇಶದಲ್ಲಿ "ಪುಂಡರು," "ಧೂರ್ತರು," "ದುಂಡವರ್ತಿಗಳು," "ಯುವಕರು," "ತರುಣ ಮೋಸಗಾರರು," "ಬಾಲೀಷ ಕೇಡಿಗಳು" ಮತ್ತು ಇದರ ಹಾಗಿರುವ ಪದಗಳನ್ನು ಬಳಸುತ್ತಾರೆ. ಬಹುಶಃ ನೀವು ಇರುವೆಡೆಗೆ ಇದಕ್ಕೆ ಸಮನವಾದ ಪದಗಳನ್ನು ಬಳಸಬಹುದು. ಅಲ್ಲಿ ಯಾವುದೇ ರೀತಿಯಲ್ಲಿ ಮಗುವಿನ ಮುಗ್ಧತೆಯು ಇಲ್ಲ; ಇವರು ಜವಾಬ್ದಾರಿಯುತ ವ್ಯಕ್ತಿಗಳಾಗಿದ್ದಾರೆ.

ಈ ಚಿತ್ರವನ್ನು ಮನದಲ್ಲಿ ಮನನ ಮಾಡಿಕೊಳ್ಳಿರಿ, ಎಲೀಷನು ಪಟ್ಟಣದೊಳಗಡೆ ಬರುತ್ತಿದ್ದಾನೆ ಎಂಬ ಸುದ್ದಿಯು ಸ್ಪಷ್ಟವಾಗಿ ಬೇತೆಲನ್ನು ತಲುಪಿತ್ತು. ಆ ವಾಕ್ಯವು ಓಣಿಯ ತುಂಟ ಪಾಳಯಕ್ಕೆ, ತರುಣ ಮೋಸಗಾರರಿಗೂ ಒಳ್ಳೆಯದನ್ನೇನೂ ಮಾಡದ ತೊಂದರೆಯನ್ನು ಕೊಡುವುದಕ್ಕಾಗಿ ಮಾರ್ಗವನ್ನು ಹುಡುಕುವವರಲ್ಲಿ ಈ ಸುದ್ದಿಯು ಹರಡಿತ್ತು. ಪ್ರವಾದಿಯು ಪಟ್ಟಣದ ಸಮೀಪಕ್ಕೆ ಬಂದಂತೆ, ಈ ದೂರ್ತರ ಗುಂಪು ಬಾಗಿಲಿನಿಂದ ಹೊರಗೆ ಬಂತು. ಆ ಸಂಖ್ಯೆಯು "ನಾಲ್ವತ್ತೆರಡು" ಎಂದು ಮುಂದೆ ಈ ಕಥೆಯಲ್ಲಿ ಬಳಸಲ್ಪಟ್ಟಿದೆ (2 ಅರಸು 2:24) ಬಹುಶಃ ಇದು ಕೇವಲ ಹಾಸ್ಯಮಾಡುವವರ ಒಂದು ಭಾಗವನ್ನು ಮಾತ್ರ ಪ್ರತಿನಿಧಿಸುವಂತದ್ದಾಗಿದೆ. (ಅನೇಕ ತರುಣರೂ ಇಲ್ಲಿರಬಹುದು ಮತ್ತು ಇದನ್ನು ಮಾಡಿರಬಹುದು, ನಂತರ ಕರಡಿಗಳಿಂದ ದೂರ ಓಡಿಹೋಗಿರಬಹುದು ಎಂದು ನಾನು ಅರ್ಥೈಸುತ್ತೇನೆ.) ಆ ಗುಂಪು ನೂರಾರು ಜನರಿಂದ ಕೂಡಿತ್ತು. ನಾನು ಮಗುವಾಗಿದ್ದಾಗ, ಕೆಲ ವ್ಯಕ್ತಿಗಳು ನನ್ನನ್ನು ತಮಾಷೆ ಮಾಡುತ್ತಿದ್ದರು. ನಿಮಗೂ ಅದೇ ತರದ ಅನುಭವಗಳಿರಬಹುದು. ಇದರ ಹಾಗೆಯೇ ನೂರಾರು ಜನರ ಗುಂಪು ನಿನ್ನನ್ನು ಹಿಂಬಾಲಿಸುತ್ತಿದ್ದರೆ, ಅಪಹಾಸ್ಯ ಮಾಡುತ್ತಿದ್ದರೆ ಏನಾಗಬಹುದು ಎಂದು ಊಹಿಸಬಲ್ಲೆಯಾ? ಇದು ಮೈ ನಡಗಿಸುವಂತಹದ್ದಾಗಿದೆ.

ಯೌವನಸ್ಥರ ಗುಂಪು ಎಲೀಷನೆಡೆಗೆ ಕೂಗುತ್ತಾ, "ಬೋಳಮುಂಡೆಯವನೇ, ಏರು; ಬೋಳಮಂಡಯವನೇ, ಏರು ಎಂದು ಕೂಗಿದರು!" ಕೆಲವರು ಯೋಚಿಸು ವು

ದೇನೆಂದರೆ "ಏರು" ಎನ್ನುವದು ಎಲೀಷನ ಅವರೋಹಣವನ್ನು ಸೂಚಿಸುವುದಾಗಿದೆ ಎಂದು; ಆ ಘಟನೆಯ ಬಗೆಗಿನ ಸುದ್ದಿಯು ಹರಡುತ್ತಲೇ "ನಿನ್ನ ಯಜಮಾನನು ಪರಲೋಕಕ್ಕೆ ಹೋದನೆಂದು ಹೇಳತ್ತಿಯಲ್ಲವೇ. ಈಗ ನೀನೂ ಕೂಡಾ ಯಾಕೆ ಹೋಗಬಾರದು?" (ನೋಡಿರಿ NCV.) ಎಂದು ಆ ತರುಣರು ತಮ್ಮ ಅಪನಂಬಿಕೆಯನ್ನು ವ್ಯಕ್ತಪಡಿಸಿದರು. ಹೇಗೋ, ಈ ಪದವು ಎಲೀಷನ ಬೇತೇಲಿನ ಮೊದಲ ಪ್ರಯಾಣವನ್ನು ಸೂಚಿಸುವ 23ನೇ ವಚನದ ಮೊದಲ ಭಾಗದಲ್ಲಿ ಬಳಕೆಯಾದುದ್ದಕ್ಕೆ ಹೋಲಿಕೆಯಾದುದ್ದರಿಂದ, ಅವರು ಕೇವಲ "ಇಲ್ಲಿ ನಿಲ್ಲಬೇಡ. ಪ್ರಯಾಣಿಸುತ್ತಲೇ ಇರು" ಎಂದು ಹೇಳುತ್ತಿರಬಹುದು. ಇನ್ನೊಂದು ರೀತಿಯಲ್ಲಿ, ಅವರು ಎಲೀಷನಿಗೆ ನಿನಗೆ ಬೇತೇಲಿಗೆ ಸ್ವಾಗತವಿಲ್ಲ ಎಂದು ಹೇಳುತ್ತಿರಬಹುದು.

ಅವರು ಎಲೀಷನನ್ನು "ಬೋಳಮಂಡೆಯವನೇ" ಎಂದು ಕರೆದರು. CJB ಯಲ್ಲಿ "ಮೇಲೆ ಹೋಗು, ಬೋಳುತಲೆಯವನೇ! ಮೇಲೆ ಹೋಗು, ಬೋಳುತಲೆವನೇ!" ಎಂದಿದೆ. ನಾನು ನನ್ನ ಬೋಳು ತಲೆಯ ಬಗೆಗೆ ತಮಾಷೆ ಮಾಡುತ್ತಿರುತ್ತೇನೆ ("ನಾನು ನನ್ನ ಕೂದಲನ್ನು ಬಿಳಿಯನ್ನಾಗಿಸಲು ಬಯಸಿದೆ ಆದರೆ ಅದು ಉದುರುವತ್ತ ತಿರುಗಿತು"), ಆದರೆ ಜನರು "ಹೊಳೆಯುವ" ನನ್ನ ತಲೆಯ ಬಗೆಗೆ ಮಾತನಾಡಿದಾಗ ನಾನು ಇನ್ನೂ ಬೆಚ್ಚಿಬೀಳುತ್ತೇನೆ ("ಆ ಮಿಂಚುವಿಕೆಯಿಂದ ನಾನು ಕುರುಡನಂತಾದೆ"). ಹೇಗೋ, ಇವುಗಳು ನಮ್ಮ ದಿನದಲ್ಲಿನ ಹುಡುಗಾಟದ ಸಂಗತಿಗಳು ಎಲೀಷನ ಕಾಲದಲ್ಲಿನ ಗಂಭೀರವಾದ ಅಪಮಾನವಾಗಿತ್ತು. ಪಂಡಿತರ ಪ್ರಕಾರ ಬೋಳುತಲೆಯು ಯೆಹೂದ್ಯರಲ್ಲಿ ವಿರಳವಾಗಿದ್ದು ಬೇರೆಯವರಿಂದ ನಾಚಿಕೆಗೆ ಈಡು ಮಾಡುವಂತದ್ದಾಗಿತ್ತು (ಯೆಶಾಯ 3:17, 24).

ಹೇಗೋ, ತರುಣರಿಗಾಗಿ ಹೇಳಲ್ಪಟ್ಟ ನಿಖರವಾದ ಮಾತಿಗೆ ಸಂಬಂಧಿಸಿಂದಂತದ್ದು ಅಪ್ರಮುಖವಾದದ್ದು. ಅಸಾಯಕವಾದ ಬಲಿಪಶುವಿನ ಅವನ ಅಥವಾ ಅವಳ ಸುತ್ತಲೂ ಮಕ್ಕಳು, ಯೌವನಸ್ಥರು, ಅಥವಾ ವಯಸ್ಕರು ಕೆಣಕುತ್ತ ನೆರೆದದ್ದನ್ನು ನಾವು ನೋಡಬಹುದು. ನೀವು ಅಲ್ಲಿದದ್ದಾದರೆ, ಇವು ಮಾತುಗಳಗಿರದೇ, ದ್ವೇಷಕ್ಕಿಂತ ಚುಚ್ಚುವಂತಹವುಗಳಾಗಿದ್ದವು ಮತ್ತು ಅದನ್ನು ಕಣ್ಣಿಂದ ನೋಡುವುದಕ್ಕೂ ಧ್ವನಿಯನ್ನು ಕೇಳುವದಕ್ಕೂ ಆಗುತ್ತಿರಲಿಲ್ಲ.

ಪ್ರವಾದಿಗಳು ಬೇತೇಲಿನ ವಿಗ್ರಹಾರಾಧನೆಯನ್ನು ಖಂಡಿಸಿದರು (ನೋಡಿರಿ 1 ಅರಸು 13:1, 4); ಈಗ ಪಟ್ಟಣದ ತರುಣರಾದ ತುಂಟರು ತಮ್ಮ ಕೋಪವನ್ನು ಎಲೀಷನ ಮೇಲೆ ಮಾತಿನ ಮೂಲಕ ಹಾಕಿದರು. ಮ್ಯಾಥಿವ್ ಹೇನ್ರಿಯವರು "ಈ ಮಕ್ಕಳು ಅವರು ಕಲಿಸಲ್ಪಟ್ಟಂತೆ ಇದ್ದರು; ವಿಶೇಷವಾಗಿ ವಿಭಿನ್ನವಾದ ಕುಲ, ಬಣ್ಣ ಮತ್ತು ಸಾಮಾಜಿಕ ಸ್ಥಿತಿಗಳಿಗೆ ಅನುಗುಣವಾಗಿ ಅವರಿಗೆ ಸುಳ್ಳು ಹೆಸರಿನಿಂದ ಕರೆದ ಮತ್ತು ಕೆಟ್ಟ ಮಾತುಗಳನ್ನು ಕೊಟ್ಟ, ಅವರ ವಿಗ್ರಹಾರಾಧಕರಾದ ಪೋಷಕರಿಂದ ಅವರು ಕಲಿತಿದ್ದರು. ಈ ತರುಣರು (ಹುಂಜಗಳು) ... ವೃದ್ಧನೊಬ್ಬನ ಹಿಂದೆ ಗುಂಪುಗೂಡಿದರು"[9] ಎಂದು ಸೂಚಿಸುತ್ತಾರೆ. ಕೆಲ ಪೋಷಕರು ಇನ್ನೂ ತಮ್ಮ ಮಕ್ಕಳಿಗೆ ಮಾತುಗಳ, ಕೃತಿಗಳ, ಮತ್ತು ನಡವಳಿಕೆಯ ಮೂಲಕ ಇತರರನ್ನು ಅಂದರೆ ವಿಶೇಷವಾಗಿ ವಿಭಿನ್ನವಾದ ಕುಲ, ಬಣ್ಣ ಅಥವಾ ಸಾಮಾಜಿಕ ಸ್ಥಿತಿಗಳನ್ನು ದ್ವೇಷಿಸಲು ಕಲಿಸುತ್ತಿರುತ್ತಾರೆ. ಎಲ್ಲಾ ಜನರು ದೇವರ ಸ್ವರೂಪದಲ್ಲಿಯೇ ಉಂಟು ಮಾಡಲ್ಪಟ್ಟಿದ್ದಾರೆಂದು ತನ್ನ ಪೋಷಕರಿಂದ ಕಲಿಸಲ್ಪಡುವ ಮಗು ಧನ್ಯನಾಗಿದ್ದಾನೆ (ಆದಿಕಾಂಡ 1:26, 27; 9:6 ನೋಡಿರಿ 1 ಪೇತ್ರ 2:17; NIV).

ಇಲ್ಲಿನ ನೈಜವಾದ ಸಮಸ್ಯೆ ಎಂದರೆ ಆ ತರುಣರು ಗೌರವ ಕೊಡುವುದನ್ನು ಕಲಿತಿರಲಿಲ್ಲ. ವೃದ್ಧರಾದ ಮನುಷ್ಯರಿಗೆ ಅವರು ಯಾವ ಗೌರವವನ್ನು ಕೊಡುತ್ತಿರಲಿಲ್ಲ. ದೌರ್ಬಲ್ಯವೆಂದು ಪರಿಗಣಿಸುವುದಕ್ಕೆ ಅವರು ಯಾವ ಅನುಕಂಪವನ್ನು ತೋರುತ್ತಿರಲಿಲ್ಲ. ದೇವರ ಪ್ರವಾದಿಯ ಬಗೆಗೆ ಅವರಿಗೆ ಯಾವ ಗೌರವವೂ ಇರಲಿಲ್ಲ. ಅವರ ಸಹಜವಾದ ಅವಮಾರ್ಯಾದೆಯು ಮರವಾದದ್ದು ದೇವರಿಗೆ ಗೌರವ ಕೊಡದೇ ಇರುವ ಕೊರತೆಯಿಂದಲೇ.

ಖೇದಮಯವಾದದ್ದೆಂದರೆ, ಅಗೌರವ ತೋರಿಸುವ ಪಾಪವೂ ಇನ್ನೂ ಅಸ್ತಿತ್ವದಲ್ಲಿ ಇದೆ.

ಕೆಲ ಮಕ್ಕಳು ತಮ್ಮ ಪೋಷಕರಿಗೆ ಇನ್ನೂ ಗೌರವ ಕೊಡುವುದಿಲ್ಲ (ಎಫೆಸ 6:1-3), ಮತ್ತು ಕೆಲ ಅಪೋಷಕರು ತಮ್ಮ ಮಕ್ಕಳನ್ನು ಗೌರವಿಸುವುದಿಲ್ಲ (ನೋಡಿರಿ ಎಫೆಸ 6:4). ಕೆಲ ಹೆಂಡತಿಯರು ತಮ್ಮ ಗಂಡಂದಿರನ್ನು ಗೌರವಿಸುವುದಿಲ್ಲ (ನೋಡಿರಿ 1 ಪೇತ್ರ 3:1-6), ಕೆಲ ಗಂಡಂದಿರು ತಮ್ಮ ಹೆಂಡತಿಯರನ್ನು ಗೌರವಿಸುವುದಿಲ್ಲ (ನೋಡಿರಿ 1 ಪೇತ್ರ 3:7; NIV) ಕೆಲ ಉದ್ಯೋಗಸ್ಥರು ತಮ್ಮ ಯಜಮಾನನ್ನು ಗೌರವಿಸುವುದಿಲ್ಲ (ನೋಡಿರಿ 1 ಪೇತ್ರ 2:18; ಎಫೆಸ 6:5-8), ಮತ್ತು ಕೆಲ ಯಜಮಾನರು ತಮ್ಮ ಉದ್ಯೋಗಸ್ತರನ್ನು ಗೌರವಿಸುವುದಿಲ್ಲ (ನೋಡಿರಿ ಎಫೆಸ 6:9). ಕೆಲವರು ಇತರರ ಆಸ್ತಿಯನ್ನು ಕಳುವು ಮಾಡುವ ಮತ್ತು ಪುಂಡಾಟದಿಂದ (ಬರೆಯುವುದನ್ನೂ ಒಳಗೊಂಡು) ಪುರಾವೆಗಳನ್ನು ಇಡುವ ಮೂಲಕ ಗೌರವಿಸುವುದಿಲ್ಲ (ನೋಡಿರಿ ರೋಮಾಪುರ 13:9). ಕೆಲವರು ಇತರರಿಗಿರುವ ಒಳ್ಳೆಯ ಹೆಸರನ್ನು ಗೌರವಿಸುವುದಿಲ್ಲ, ಆದರೆ ಅವರು ಇಲ್ಲದ ಮಾತನ್ನು ಮತ್ತು ಸುಳ್ಳು ನಿಂದನೆಯನ್ನು ಹರಡುತ್ತಾರೆ (ನೋಡಿರಿ 1 ಪೇತ್ರ 2:1). ಸರ್ವಸಾಮಾನ್ಯವಾದ ಅಗೌರವದ ಮೂಲ ಯಾವುದು? ಅದರ ಮೂಲವು, ಎಲೀಷನ ದಿನದಲ್ಲಿದ್ದಂತೆ, ದೇವರಿಗೆ ಮತ್ತು ಆತನ ವಾಕ್ಯಕ್ಕೆ ಇರುವ ಅಗೌರವ ತೋರಿಸುವ ಗುಣದಿಂದಲೇ ಆಗಿದೆ. ದೇವರು ಬಲು ಹಿಂದೆಯೇ ಪ್ರಶ್ನೆಯನ್ನು ಕೇಳಿದಂತೆ ಈಗಲೂ ಕೇಳುತ್ತಿದ್ದಾನೆ ಅದು ಯಾವದೇಂದರೆ "ನನ್ನ ಗೌರವವು ಎಲ್ಲಿ?" ಎಂಬುದಾಗಿದೆ (ಮಲಾಕಿಯ 1:6).

**ಯೋಗ್ಯವಾದ ಪರಿಣಾಮ**

ಗುಂಪಿನ ಕಾರ್ಯಗಳು ಏಕಪ್ರಕಾರವಾಗಿ ಏರುತ್ತಾ ಹೋದವು, ಎಸೆಯುವದು ಮತ್ತು ಅಪಮಾನಮಾಡುವದು, ಗುಂಪುಗಳು ಸಾಮಾನ್ಯವಾಗಿ ಕಲ್ಲು, ಕಟ್ಟಿಗೆ, ಮಣ್ಣು ಹೀಗೆ ಯಾವ ಯಾವುದು ಕೈಯಲ್ಲಿ ಸಿಕ್ಕುವದೋ ಅದನ್ನು ಎಸೆಯುತ್ತಾ ಹೋಗುತ್ತದೆ. ಈ ಗುಂಪು ಮಾತುಗಳಿಂದ ಅವಮಾನ ಮಾಡುತ್ತಿದ್ದರು. ನಮ್ಮ ವೇದ ಭಾಗವು ಹೇಳುವಂತೆ ಎಲೀಷನು "ಅವನು ಅವರ ಕಡೆಗೆ ತಿರುಗಿಕೊಂಡು" (2 ಅರಸು 2:24ಎ) ಎಂದಿದೆ. ಅದು ಹೇಳುವುದೇನೆಂದರೆ, ಅವರು ಆತನ ಹತ್ತಿರದಲ್ಲಿಯೇ ಅವನನ್ನು ಹಿಂಬಾಲಿಸುತ್ತ ಆತನನ್ನು ತಮ್ಮ ಮಾತುಗಳಿಂದ ಪೀಡಿಸುತ್ತಿದ್ದರು. ಮೊದಮೊದಲು ಪ್ರವಾದಿಯು ಅವರನ್ನು ಅಲಕ್ಷಿಸಲು ಯತ್ನಿಸಿದನು ಎಂದು ಈ ಮಾತುಗಳು ಸೂಚಿಸುವವುಗಳಾಗಿವೆ. ಅವರು ತಮ್ಮ ಮೊದಲಿಸುವಿಕೆಯನ್ನು ಮುಂದುವರೆಸಿದಾಗ, ಆತನು ನಿಂತನು ಅವರೆಡೆಗೆ ನೋಡಿದನು, ಮತ್ತು "ಯೆಹೋವನ ಹೆಸರಿನಲ್ಲಿ ಅವರನ್ನು ಶಪಿಸಿದನು" (ವಚನ 24ಬಿ).

"ಯೆಹೋವನ ಹೆಸರಿನಲ್ಲಿ ಅವರನ್ನು ಶಪಿಸಿದನು" ಅದರ ಅರ್ಥವು ಪ್ರವಾದಿಯು ದೇವರನ್ನು ಅವರೊಡನೆ ವ್ಯವಹರಿಸಲು ಕರೆದು ಎಂದು. ಎಲೀಷನು ಟೀಕೆಗೆ ಒಳಗಾಗಿದ್ದು ಈ ಶಪಿಸುವಿಕೆಯಿಂದಲೇ. ಕೊನೇ ಪಕ್ಷ ಮೂರಾದರೂ ಆಜ್ಞೆಗಳು ಕ್ರಮವಾಗಿವೆ. ಮೊದಲಿಗೆ, ಎಲೀಷನು ಹಳೆಯ ಒಡಂಬಡಿಕೆಯ ಸಮಯದಲ್ಲಿ ಇದ್ದಂತವನು ಎಂಬುದನ್ನು ಮನದಲ್ಲಿಟ್ಟುಕೊಳ್ಳಿರಿ. ಹೊಸ ಒಡಂಬಡಿಕೆಯಲ್ಲಿ ಆಜ್ಞೆ ಮಾಡಿದಂತೆ "ನಿಮ್ಮನ್ನು ಹಿಂಸಿಸುವವರಿಗೆ ಆಶೀರ್ವಾದ ಮಾಡಿರಿ; ಶಪಿಸದೆ ಆಶೀರ್ವದಿಸಿ" (ರೋಮಾಪುರ 12:14) ಆದರೆ ಎಲೀಷನು ಈ ಹೊಸ ಒಡಂಬಡಿಕೆಯ ನಿಯಮದ ಅಡಿಯಲ್ಲಿ ಇರಲಿಲ್ಲ.

ಎರಡನೆಯದಾಗಿ, ದೇವರ ಪ್ರವಾದಿಗಳು (ಆತನ ಹೆಸರಿನಲ್ಲಿ ಮಾತನಾಡುವಂತವರು) ಆತನ ಪ್ರತಿನಿಧಿಗಳಾಗಿದ್ದಾರೆ ಎಂದು ಮೋಶೆಯ ಧರ್ಮಶಾಸ್ತ್ರವು ಕಲಿಸುತ್ತಿತ್ತು. ಅವರಿಗೆ ಅಗೌರವ ತೋರುವದು ಮತ್ತು ಅವರ ಸಂದೇಶಕ್ಕೆ ಅಗೌರವ ತೋರುವದು ಯೆಹೋವನೆಡೆಗೆ ಅಗೌರವಿಸಿದಂತೆ ಎಣಿಸಲ್ಪಡುವುದಾಗಿತ್ತು (ನೋಡಿರಿ ಧರ್ಮೋಪದೇಶಕಾಂಡ 18:19). ಮುಂದೆ, ಧರ್ಮೋಪದೇಶವು ಹೇಳುವುದನೆಂದರೆ ದೇವರನ್ನು ನಿಂದಿಸಿದವನು ಸಾಯಲೇ ಬೇಕು (ಯಾಜಕಕಾಂಡ 24:16). 2 ಪೂರ್ವಕಾಲವೃತ್ತಾಂತ 36:16ರಲ್ಲಿ ದೇವರು

ಯಾಕೆ ಇಸ್ರಾಯೇಲ್ಯರನ್ನು ದಾಸತ್ವಕ್ಕೆ ತೆಗೆದುಕೊಂಡು ಹೋಗಲು ಬಿಟ್ಟನು. ಎಂಬುದರ ಬಗೆಗೆ ಹೇಳುತ್ತಾನೆ: "ಅವರು ನಿರಂತರವಾಗಿ ದೇವರ ಪ್ರವಾದಿಗಳನ್ನು ಅಪಹಾಸ್ಯಮಾಡುತ್ತಾ ಇದ್ದರು ಆತನ ಮಾತುಗಳನ್ನು ಅಲ್ಲಗಳೆದರು ಆತನ ಪ್ರವಾದಿಗಳನ್ನು ಕೊಲ್ಲಿಸಿದರು, ದೇವರ ಕೋಪವು ಆತನ ಜನರ ಸುತ್ತಲೂ ಆವರಿಸಿತು." ಧರ್ಮಶಾಸ್ತ್ರದ ಪ್ರಕಾರ, ಎಲೀಷನನ್ನು ಅಣಕಿಸಿದವರು ಶಾಪಕ್ಕೆ ಗುರಿಯಾದರು ಮತ್ತು ದೇವರ ಕೋಪಕ್ಕೆ ಒಳಗಾದರು.

ಮೂರನೆಯದಾಗಿ, ಎಲೀಷನು ತಾನೇನು ಮಾಡಬಹುದು ಎಂದು ಕರ್ತನಿಗೆ ವಿವರಿಸಿದನು ಎಂಬುದರ ಬಗೆಗೆ ಯಾವ ಸೂಚನೆಯೂ ಇಲ್ಲ. ಆತನು ಆ ವಿಷಯವನ್ನು ದೇವರ ಕೈಗೆ ಒಪ್ಪಿಸಿದನು.

ದೇವರು ಏನು ಮಾಡಿದನು? ಆತನು ಆ ಹುಡುಗರ "ಅಪಾಯವಿಲ್ಲದ ಕುಚೇಷ್ಟೆಯನ್ನು" ಅಲಕ್ಷಿಸಿದನೇ? ಆತನು ನಕ್ಕು "ಒಳ್ಳೆಯದು, ಬಾಲಕರು ಬಾಲಕರೇ ಆಗಿರುವರಲ್ಲವೇ"? ಎಂದು ಹೇಳಿದನೇ ಇಲ್ಲ, ಇಲ್ಲ, ಇಲ್ಲ. ದೇವರು "ನೀವು ನನ್ನ ಮಾತನ್ನು ಕೇಳಲೊಲ್ಲದೆ ನನಗೆ ವಿರೋಧವಾಗಿ ನಡೆದರೆ ನಾನು ನಿಮ್ಮ ಪಾಪಗಳ ನಿಮಿತ್ತ ಏಳರಷ್ಟಾಗಿ ನಿಮ್ಮನ್ನು ಬಾಧಿಸುವೆನು. ನಿಮ್ಮ ಮೇಲೆ ಕಾಡು ಮೃಗಗಳನ್ನು ಬರಮಾಡುವೆನು; ಅವು ನಿಮ್ಮನ್ನು ಸಂತಾನವಿಲ್ಲದವರನ್ನಾಗಿ ಮಾಡುವವು" (ಯಾಜಕಕಾಂಡ 26:21, 22ಎ). ಎಂದು ಎಚ್ಚರಿಸುತ್ತಾನೆ. ವಿಗ್ರಹರಾಧಕ ಮತ್ತು ತಿರುಗಿಬೀಳುವ ಯೆರಿಕೋವಿನ ತಂದೆಗಳು ಮತ್ತು ತಾಯಿಗಳು ಕಲಿತ ಮಾತುಗಳಿಗೆ ಅರ್ಥವಿದೆ.

ಪಟ್ಟಣದ ಹತ್ತಿರದಲ್ಲಿ ಅರಣ್ಯವಿದ್ದು, ಬೇಟೆಯಾಡುವ ಕಾಡುಮೃಗಗಳು ಇದ್ದವು. "ಕೂಡಲೆ ಕಾಡಿನಿಂದ ಎರಡು ಹೆಣ್ಣು ಕರಡಿಗಳು ಬಂದು ಆ ಹುಡುಗರಲ್ಲಿ ನಾಲ್ವತ್ತೆರಡು ಮಂದಿಯನ್ನು ಹರಿದುಬಿಟ್ಟವು" (2 ಅರಸು 2:24ಸಿ). ಹುಚ್ಚಾದ ಕರಡಿಗಳು ... ಚಿತ್ಕಾರ ಮಾಡುತ್ತಿರುವ ಆ ಉಗ್ರತೆ ... ಸೀಳುವ ನಖಗಳು ... ನೀರು ಜೀಳುತ್ತಿರುವ ಹಲ್ಲುಗಳು ... ಪ್ರಾಣಸಂಕಟದಿಂದ ಬರುವ ಚೀರುವಿಕೆ ... ಸಿಂಪಡಿಸಿದ ರಕ್ತ ... ಕಚ್ಚಿದ ದೇಹಗಳನ್ನು ಅಲ್ಲಿಯೇ ಬಯಲಲ್ಲಿಯೇ ಮಾರ್ಗದಲ್ಲಿಯೇ ಬಿಟ್ಟು ... ಗಾಯಗೊಂಡವರು ಪಟ್ಟಣದ ಬಾಗಿಲಿನತ್ತ ಓಡಿದರು ಎಂಬುದಾಗಿ ನಮ್ಮ ಮನದಲ್ಲಿ ಒತ್ತಾಯಿಸುತ್ತಿರುವ ಸ್ಪುಟವಲ್ಲದ ಮತ್ತು ಅವರ ಮಾರ್ಗದಲ್ಲಿರುವ ಒತ್ತಾಯಿಸುತ್ತಿರುವ ಭಯಂಕರವಾದ ನೋಟಗಳು ಈ ಮಾತುಗಳನ್ನು ನಾವು ಓದುವುದಿಲ್ಲ.

ನಾಲ್ವತ್ತೆರಡು ಗಾಯಾಳುಗಳು ಅಲ್ಲಿ ಹರಡಿಕೊಂಡಿದ್ದರು ಎಂಬುದು ನಮಗೆ ಖಚಿತವಾಗಿಲ್ಲ. ಬಹುಶಃ ಕೆಲವರು ಸತ್ತಿರಬಹುದು, ಬಹುಶಃ ಕೆಲವರ ರಂಧ್ರದ ಕಲೆಗಳು ಅವರ ಜೀವಿತದ ಉದ್ದಕ್ಕೂ ಅವರು ಎಲೀಷನನ್ನು ಅಪಹಾಸ್ಯಮಾಡಿದ ದಿನವನ್ನು ನೆನಪಿಸಿದ್ದಿರಬಹುದು. ಇದು ಬೇತೇಲಿನಲ್ಲಿ ಕಷ್ಟದ, ಕಷ್ಟದ ದಿನವಾಗಿದ್ದು ಆ ಪಟ್ಟಣದ ಜನರ ಮನದಲ್ಲಿ ಲೋಹದಿಂದ ಕೆತ್ತಿದಂತಿತ್ತು.

ಈ ನ್ಯಾಯತೀರ್ಪು ದೇವರಿಂದಲೇ ಎಂಬುದರಲ್ಲಿ ಸಂಶಯವಿಲ್ಲ. ನಿಯಮದ ಪ್ರಕಾರ ಕರಡಿಗಳು ಕೇವಲ ಭಯಪಟ್ಟಾಗ ಮತ್ತು ಹಸಿವೆಯಿಂದ ಇದ್ದಾಗ ದಾಳಿಮಾಡುವವುಗಳಾಗಿರುತ್ತವೆ. ಎರಡು ಹೆಣ್ಣುಕರಡಿಗಳ ಬಗೆಗೆ, ಎಡಗಡೆ ಮತ್ತು ಬಲಗಡೆ ಸೀಳುವದು, ನಾಲ್ವತ್ತೆರಡು ತರುಣರು ಅವರು ಊನವಾಗುವ ತನಕ ಅಥವಾ ಕೊಲ್ಲುವ ತನಕ ಜನ ಸಮೂಹದ ಮಧ್ಯದಲ್ಲಿ ದಾಳಿ ಮಾಡಿದುದರ ಬಗೆಗೆ ಯಾವ ಸ್ವಾಭಾವಕತೆಯು ಇಲ್ಲ. ಬೇತೇಲು ನಂತರದಲ್ಲಿ ಕಠಿಣಮಯವಾದ ಕಷ್ಟದ ಮಾರ್ಗವನ್ನು ಕಲಿತುಕೊಂಡಂತಹದ್ದನ್ನು ಪೌಲನಿಂದ ಸೂಚಿಸಲಾಗಿದೆ ಅದು "ಮೋಸ ಹೋಗಬೇಡಿರಿ, ದೇವರು ತಿರಸ್ಕಾರ ಸಹಿಸುವನಲ್ಲ. ಮನುಷ್ಯನು ತಾನು ಏನನ್ನು ಬಿತ್ತುತ್ತಾನೋ ಅದನ್ನೆ ಕೊಯ್ಯುತ್ತಾನೆ" (ಗಲಾತ್ಯ 6:7; ಒತ್ತಿ ಹೇಳಿದ್ದು ನನ್ನದು; ನೋಡಿರಿ ಧರ್ಮೋಪದೇಶಕಾಂಡ 7:10). ಕರಡಿಗಳು ದಾಳಿ ಮಾಡಿದ್ದಕ್ಕೆ ನೀವು ಯಾರನ್ನಾದರೂ ಟೀಕಿಸುವವರಿದ್ದಿರಾ? ಹಾಗಿದ್ದರೆ ಎಲೀಷನನ್ನು ಟೀಕಿಸದಿರಿ, ಆದರೆ ಕರ್ತನೇ ತಾನೇ, ಹೇಗೋ, "ಜ್ಞಾನಿಯಾದ ದೇವರ ಎಲ್ಲಾ ಅಪರಿಮಿತವಾದ

ಮೃತ್ಯುಗಳು ಮಾಡದೇ ಬಿಟ್ಟಂತ ಹಾದು ಹೋದ ನಿಂದನಾಯುಕ್ತ ನ್ಯಾಯತೀರ್ಪಿನ ಮೇಲಿನ ನ್ಯಾಯತೀರ್ಪಿನ ಬಗೆಗೆ ಎಚ್ಚರದಿಂದಿರಿ!"[10]

ದೇವರು ಯಾವಾಗಲೂ ನಾಟಕೀಯವಾದ, ದುರಂತದ ಘಟನೆಗಳನ್ನು ಬಳಸುವವನಾಗಿದ್ದು, ಹೊಸ ಯುಗದ ಘಟನೆಗಳ ಹತ್ತಿರದಲ್ಲಿ ಹೊಸ ಆರಂಭವನ್ನು ಸಂಸ್ಥಾಪಿಸುವನು ಇದರ ಅರ್ಥವು ಹಳೆಯ ನಿಯಮಗಳನ್ನೆಲ್ಲಾ ಬದಲಾಯಿಸುತ್ತಾನೆ ಎಂದೆಲ್ಲಾ.[11] ಇಸ್ರಾಯೇಲ್ಯರು ದೇವರೊಂದಿಗೆ ಅರಣ್ಯದಲ್ಲಿ ಹೊಸ ಸಂಬಂಧವನ್ನು ಪ್ರಾರಂಭಿಸಿದಾಗ, ನಾದಾಬ ಮತ್ತು ಅಬೀಹು ವೇದಿಯ ಮೇಲೆ ಅಶುದ್ಧವಾದದ್ದನ್ನು ಸಮರ್ಪಿಸಿದ್ದಕ್ಕಾಗಿ ಸತ್ತರು (ಯಾಜಕಕಾಂಡ 10). ಯೆಹೋಶುವನು ಇಸ್ರಾಯೇಲ್ಯರ ಮೇಲಿನ ನಾಯಕತ್ವವನ್ನು ತೆಗೆದುಕೊಂಡಾಗ, ಆಕಾನನು ಕೊಲ್ಲಲ್ಪಟ್ಟನು ಯಾಕೆಂದರೆ ಆತನು ದೇವರಿಗೆ ಮೀಸಲಾದ ವಸ್ತುಗಳನ್ನು ತೆಗೆದುಕೊಂಡಿದ್ದನು (ಯೆಹೋಶುವ 7). ಅರಸನಾದ ದಾವೀದನು ತನ್ನ ಹೊಸ ರಾಜಧಾನಿಯಾದ ಯೆರೂಸಲೇಮಿಗೆ ಹೋಗುವಾಗ ಉಜ್ಜನು ಮಂಜೋಷದ ಪೆಟ್ಟಿಗೆಯನ್ನು ಮುಟ್ಟಿದ್ದರಿಂದ ಸತ್ತನು (2 ಸಮು ವೇಲ 6:1-7). ಕ್ರೈಸ್ತ ಶಂಕೆಯು ಆರಂಭವಾದಾಗಲೂ ಕೂಡಾ, ದೇವರ ಕೋಪವು ಅನನೀಯ ಮತ್ತು ಸಫೈರರ ಮೇಲೆ ಬಿತ್ತು ಯಾಕೆಂದರೆ ಅವರು ಪರಿಶುದ್ಧಾತ್ಮನಿಗೆ ಸುಳ್ಳುಹೇಳಿದ್ದರು (ಅಪೊಸ್ತಲರ ಕೃತ್ಯಗಳು 5). ಈ ಪ್ರತಿಯೊಂದು ದುರಂತಗಳು ಸೂಚಿಸುವ ಸಂದೇಶವು "ದೇವರು ಏನನ್ನಾದರೂ ಹೇಳಿದ್ದಾದರೆ ಅದನ್ನು ಆತನು ಮಾಡೇ ಮಾಡುತ್ತಾನೆ! ನೀನು ದೇವರನ್ನು ಮತ್ತು ಆತನ ಚಿತ್ತವನ್ನು ಗೌರವಿಸಲೇ ಬೇಕು! ನೀನು ಹಾಗೆ ಮಾಡದಿದ್ದರೆ ದುರಂತವು ನಿನ್ನನ್ನು ಹಿಂಬಾಲಿಸುತ್ತದೆ!"

ಬೇತೇಲಿನ ನಿವಾಸಿಗಳು ಈ ಪಾಠವನ್ನು ಕಲಿತರೇ? ನಮಗೆ ಖಚಿತವಿಲ್ಲ - ಆದರೆ ಕೊನೇಪಕ್ಷ, ನಾವು ತಿಳಿದಂತೆ, ಅವರು ಎಲೀಷನನ್ನಾಗಲೀ ಅಥವಾ ದೇವರ ಯಾವುದೇ ಪ್ರವಾದಿಯನ್ನಾಗಲೀ ಮೂದಲಿಸಲಿಲ್ಲ. ವಾಸ್ತವವಾಗಿ, ದುರಂತದ ಸುದ್ದಿಯು ಈ ಊರಿನುದ್ಧಕ್ಕೂ ಹರಡಿರಬೇಕು, ಯಾಕೆಂದರೆ ನಾವೆಲ್ಲಿಯೂ ಎಲೀಷನನ್ನು ಮೂದಲಿಸಿದ ಸುದ್ಧಿಯನ್ನು ಯಾವದೇ ಸಮಯದಲ್ಲಿ ಅವರಿಗೆ ಜೀವವಾಗಿತ್ತು ಆದರೆ ಸಂದೇಶವು ಸ್ಪಷ್ಟವಾಗಿದೆ: ಎಲೀಷನ ಸೇವೆಯ ಅರ್ಥವು ಯಾರು (ಯೆಹೋವನನ್ನು) ಗೌರವಿಸುತ್ತಾರೋ ಅವರಿಗೆ ಜೀವವಾಗಿತ್ತು ಆದರೆ ಆತನನ್ನು ಅಲ್ಲಗಳೆದವರಿಗೆ ಅದು ಮರಣವಾಗಿತ್ತು.[12] "ಆದ್ದರಿಂದ ದೇವರ ದಯವನ್ನೂ *ಮತ್ತು* ಕಾಠಿಣ್ಯವನ್ನೂ ನೋಡು" (ರೋಮಾಪುರ 11:22ಎ; ಒತ್ತಿ ಹೇಳಿದ್ದು ನನ್ನದು).

## ಮುಕ್ತಾಯ (2:25)

ಎಲೀಷನು ಬೇತೇಲಿನಲ್ಲಿ ತನ್ನ ಕೆಲಸವನ್ನು (ಯಾವುದೇ ಆಗಿರಲಿ) ಮುಗಿಸಿದ ಮೇಲೆ, "ಅಲ್ಲಿಂದ ಕರ್ಮೆಲ್ ಬೆಟ್ಟಕ್ಕೆ ಹೋದನು" (ವಚನ 25ಎ). ಅದು ಆತನ ಗುರುವಿನ ಶ್ರೇಷ್ಟ ವಿಜಯದ ಸ್ಥಾನವಾಗಿತ್ತು (1 ಅರಸು 18). ಕರ್ಮೆಲ ಬೆಟ್ಟವು ಎಲೀಷನಿಗೆ ಆಶ್ರಯ ಸ್ಥಾನವಾಗಿ ಪರಣಮಿಸಿತ್ತು (2 ಅರಸು 4:25). ಬಹುಶಃ ಆ ಸ್ಥಳವು ಆತನ ಆತ್ಮೀಕ ಜೀವಿತವನ್ನು ಪುನರುಜ್ಜೀವಿಸಿರಬಹುದು. "ಅನಂತರ ಆತನು ತನ್ನ ಮನೆಯಿರುವ ಸ್ಥಳವಾದ [ಮೂವತ್ತು ಮೈಲಿ ಅದಕ್ಕಿಂತಲೂ ಹೆಚ್ಚು ದೂರದ] ಸಮಾರ್ಯಕ್ಕೆ ಬಂದನು" (2:25ಬಿ), ಎಲ್ಲಿ ಅವನ ಮನೆ ಇತ್ತು (ನೋಡಿರಿ 6:24, 32). ಇಸ್ರಾಯೇಲ್ಯರ ಉತ್ತರ ರಾಜ್ಯದ ರಾಜಧಾನಿಯಾದ ಸಮಾರ್ಯ ಪಟ್ಟಣವು ಅರಸನಾದ ಯೆಹೋರಾಮನ ಮಗನಾದ ಅಹಾಬನ ಮನೆಯಾಗಿತ್ತು. ರಾಜ್ಯದಲ್ಲಿ ಏನೇನು ಸಂಭವಿಸುತ್ತದೆ ಎಂಬುದರ ಮಾಹಿತಿಗಾಗಿ ಎಲೀಷನು ಅಲ್ಲಿದ್ದನು - ಆದರೆ ಅದರ ಬಗೆಗೆ ಹೆಚ್ಚಿನದನ್ನು ಮುಂದಿನ ಪಾಠದಲ್ಲಿ ನಾವು ಹೇಳುತ್ತೇವೆ.

ಈ ಪಾಠದಿಂದ ನಾವು ಕಲಿಯಬೇಕಾದದ್ದು ಏನು? ನಾವು ಎರಡು ಕರಡಿಗಳನ್ನು ನಮ್ಮ ಎರಡು ಕರಡಿಗಳನ್ನು ನಮ್ಮ ಹಿಂದುಗಡೆಯಲ್ಲಿ ಕಟ್ಟಿಕೊಂಡು ಯಾರು ಸುವಾರ್ತೆಯನ್ನು ಹಾಸ್ಯ

ಮಾಡುತ್ತಾರೋ ಅವರ ಮೇಲೆ ಬಿಡಬೇಕಂದಲ್ಲ. ಬದಲಾಗಿ, ಈ ಕೆಳಗೆ ಚರ್ಚಿಸಿದ ಮೂಲ ಸತ್ಯಗಳು ಇನ್ನೂ ನಿಜವಾಗಿವೆ ಎಂದು ತಿಳಿದುಕೊಳ್ಳುವದು ಆಗಿದೆ.

- ದೇವರನ್ನು ಆತನಿಗೆ ಸಂಬಂಧಿಸಿದ ಸಂಗತಿಗಳನ್ನು ಗೌರವಿಸಿರಿ ಮತ್ತು ಜೀವಿಸಿರಿ.
- ದೇವರನ್ನು ಆತನಿಗೆ ಸಂಬಂಧಿಸಿದ ಸಂಗತಿಗಳನ್ನು ಅಗೌರವಿಸಿರಿ ಮತ್ತು ಮರಣಹೊಂದಿರಿ.

ದೇವರನ್ನು ಮತ್ತು ಆತನ ವಾಕ್ಯವನ್ನು ಗೌರವಿಸುವುದರಲ್ಲಿ ನಾವು ವಿಫಲರಾದರೆ, ದುರದೃಷ್ಟವಶಾತ್ ಮೃಗದ ಆವೇಶದಲ್ಲಿ ನಾವು ಕೊಲ್ಲಲ್ಪಡುವೆವು; ಆದರೆ ನಾವು ಆತನಿಗೆ ಅವಿಧೇಯರಾದರೆ ಆತ್ಮೀಕವಾಗಿ ಸಾಯುವೆವು (ಎಫೆಸ 2:1). ಮತ್ತು ಪಶ್ಚಾತ್ತಾಪ ಪಡದೇ ಹೋದರೆ ನಿತ್ಯ ಮರಣವನ್ನು ಹೊಂದುವೆವು (ಪ್ರಕಟಣೆ 20:14, 15). ಹಿಂದೆ, ಮೋಶೆಯು ಜನರಿಗೆ "ನಾನು ಜೀವಶುಭಗಳನ್ನೂ ಮರಣಾಶುಭಗಳನ್ನು ಈಗ ನಿಮ್ಮ ಮುಂದೆ ಇಟ್ಟಿದ್ದೇನೆ" (ಧರ್ಮೋಪದೇಶಕಾಂಡ 30:15) ಎಂದು ಹೇಳಿದನು. ಅದೇ ರೀತಿಯ ಆಯ್ಕೆಯು ನಮ್ಮ ಮುಂದಿದೆ. ನಮ್ಮ ಆಯ್ಕೆಯು ಯಾವುದು?

---

ಟಿಪ್ಪಣೆಗಳು

[1]G. Rawlinson, "2 Kings," *The Pulpit Commentary,* vol. 5, *1 & 2 Kings*, ed. H. D. M. Spence and Joseph S. Exell (Grand Rapids, Mich.: Wm. B. Eerdmans Publishing Co., 1950), 23. [2]Donald J. Wiseman, *1 and 2 Kings: An Introduction and Commentary,* Tyndale Old Testament Commentaries (Downers Grove, Ill.: Inter-Varsity Press, 1993), 197. [3]Ibid. [4]F. W. Krummacher, *Elisha, a Prophet for Our Times* (Grand Rapids, Mich.: Kregel Publications, 1993), 11. [5]Clyde M. Miller, *First and Second Kings,* The Living Word Commentary series, vol. 7 (Abilene, Tex.: A.C.U. Press, 1991), 314. [6]2 ಅರಸನ್ನು ಬರೆದವರು ಯಾರು ಎಂಬುದು ನಮಗೆ ತಿಳಿಯದು. ಯೆಹೂದಿ ಸಂಪ್ರದಾಯದ ಪ್ರಕಾರ ಈ ಪುಸ್ತಕವನ್ನು ಯೆರಮಿಾಯನು ಬರೆದಿದ್ದಾನೆ ಎಂದಿದೆ. [7]T. E. McComisky, "Elisha, Eliseus," *The Zondervan Pictorial Encyclopedia of the Bible,* ed. Merrill C. Tenney (Grand Rapids, Mich.: Zondervan Publishing House, 1975, 76), 2:291. [8]Krummacher, 14. [9]Matthew Henry, *Commentary on the Whole Bible,* ed. Leslie F. Church (Grand Rapids, Mich.: Zondervan Publishing House, 1961), 401. [10]Miller, 315.

[11]Warren W. Wiersbe, *Be Distinct* (Colorado Springs, Colo.: Victor, 2002), 21. [12]J. H. Stek, "Elisha," in *The International Standard Bible Encyclopedia,* rev., ed. Geoffrey W. Bromiley (Grand Rapids, Mich.: Wm. B. Eerdmans Publishing Co., 1982), 2:71.